**ಎಂ ವಿ ಸಿ 1475/2023 ಪಿಡಬ್ಲ್ಯೂ.1**

**ಸಾಕ್ಷಿಯನ್ನು ದಿ: 04.02.2025 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಎನ್.ಪಿ ವಕೀಲರಿಂದಃ**

ದಿನಾಂಕ 24.08.2023 ರ ರಾತ್ರಿ ಸುಮಾರು 8.00 ರಿಂದ 9.00 ಗಂಟೆ ಸಮಯದಲ್ಲಿ ನಾನು ನನ್ನ ಸ್ನೇಹಿತನಾದ ರವಿಯೊಂದಿಗೆ ಪ್ರಯಾಣ ಮಾಡುತ್ತಿದ್ದ ದ್ವಿಚಕ್ರ ವಾಹನದ ನೋಂದಣಿ ಸಂಖ್ಯೆ ನನಗೆ ಗೊತ್ತಿಲ್ಲ. ಅಪಘಾತಪಡಿಸಿದ ದ್ವಿಚಕ್ರ ವಾಹನದ ನೋಂದಣಿ ಸಂಖ್ಯೆಯು ಸಹ ನನಗೆ ಗೊತ್ತಿಲ್ಲ. ಅಂದು ತೆಂಡೆಕೆರೆ ಕಡೆಯಿಂದ ಚಿನಕುರುಳಿ ಕಡೆಗೆ ಹೋಗುತ್ತಿದ್ದೆವು. ಅಪಘಾತಪಡಿಸಿದ ದ್ವಿಚಕ್ರ ವಾಹನವು ಚಿನಕುರುಳಿ ಕಡೆಯಿಂದ ಕೆ ಆರ್ ಪೇಟೆ ಕಡೆಗೆ ಹೋಗುತ್ತಿತ್ತು. ಅಪಘಾತ ಸಂಭವಿಸಿದ ಸಮಯ ರಾತ್ರಿಯಾಗಿದ್ದರಿಂದ ಅಪಘಾತ ಸ್ಥಳದಲ್ಲಿ ಕತ್ತಲು ಇತ್ತು ಎಂದರೆ ಸರಿ. ಕತ್ತಲೆ ಇದ್ದ ಕಾರಣ ಅಪಘಾತಪಡಿಸಿದ ದ್ವಿಚಕ್ರ ವಾಹನವು ಯಾವ ಕಡೆಯಿಂದ ಹೇಗೆ ಬಂದಿತು ಎಂದು ನನಗೆ ಹೇಳಲು ಆಗುವುದಿಲ್ಲ.

ನನ್ನ ಸ್ನೇಹಿತ ರವಿಯ ಬಳಿ ವಾಹನ ಚಾಲನೆ ಪರವಾನಗಿ ಇದೆ, ಆದರೆ ನಾನು ಅದನ್ನು ನೋಡಿಲ್ಲ. ಪ್ರಯಾಣ ಮಾಡುವಾಗ ನಾನು ಮತ್ತು ನನ್ನ ಸ್ನೇಹಿತ ಹೆಲ್ಮೆಟ್ ಧರಿಸಿದ್ದೆವು. ವಾಹನ ಚಾಲನೆ ಪರವಾನಗಿಯನ್ನು ಹೊಂದದೆ ವಾಹನ ಚಾಲನೆ ಮಾಡಿದ ನನ್ನ ಸ್ನೇಹಿತ ರವಿಯ ಕಾರಣದಿಂದಲೇ ಸದರಿ ಅಪಘಾತ ಸಂಭವಿಸಿದೆಯೇ ಹೊರತು ಮತ್ತೊಂದು ದ್ವಿಚಕ್ರ ವಾಹನದ ಚಾಲಕನ ತಪ್ಪಿನಿಂದ ಆ ಅಪಘಾತ ಸಂಭವಿಸಿಲ್ಲ ಎಂದರೆ ಸರಿಯಲ್ಲ. ನಾನು ಹೆಲ್ಮೆಟ್ ಧರಿಸಿರದೆ ಇದ್ದ ಕಾರಣ ನನ್ನ ತಲೆಗೆ ಏಟಾಗಿತ್ತು ಎಂದರೆ ಸರಿಯಲ್ಲ. ನನ್ನ ಚಿಕಿತ್ಸೆಗೆ ರೂ. 2 ಲಕ್ಷ ಖರ್ಚು ಆಗಿದೆ ಎಂಬ ಬಗ್ಗೆ ನನ್ನ ಬಾಮೈದ ಬರೆದಿಟ್ಟಿದ್ದಾನೆ, ನನಗೆ ಆ ಬಗ್ಗೆ ಏನು ಗೊತ್ತಿಲ್ಲ. ರೂ. 2 ಲಕ್ಷ ಖರ್ಚು ಆಗದೆ ಇದ್ದರೂ ಸಹ ಹೆಚ್ಚಿಗೆ ಪರಿಹಾರ ಪಡೆಯಬೇಕು ಎಂಬ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಿಕಿತ್ಸಾ ಸಮಯದಲ್ಲಿ ಸಹಾಯಕನಾಗಿ ಇಟ್ಟುಕೊಂಡಿದ್ದ ವ್ಯಕ್ತಿಯ ಹೆಸರು ನನಗೆ ಗೊತ್ತಿಲ್ಲ. ನಾನು ತಿಂಗಳಿಗೆ ರೂ. 25 ಸಾವಿರ ಸಂಪಾದನೆ ಮಾಡುತ್ತಿದ್ದೆ ಎಂದು ತೋರಿಸಲು ಯಾವುದೇ ದಾಖಲೆ ಇಲ್ಲ. ಅಪಘಾತದಲ್ಲಿ ನಾನು ಹೇಳಿದ ರೀತಿಯಲ್ಲಿ ಗಾಯಗಳು ಆಗದೆ ಇದ್ದರೂ ಸಹ

ಹೆಚ್ಚಿನ ಪರಿಹಾರ ಪಡೆಯುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

**(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಸಾ ಓ ಹೇ ಸ ಒ**

**(ಬಾಬು ಎನ್)**
**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಪಾಂಡವಪುರ**